ಅದೇ ಸಮಯಕ್ಕೆ ನವಮಿಯ ಮನೆಯ ಬಳಿ ಇದ್ದ ಕಾನ್‌ಸ್ಟೆಬಲ್ ಬಂದು,

"ಸರ್... ಈ ವಿಷಯ ಎಷ್ಟು ಮುಖ್ಯ ಅಂತ ಗೊತ್ತಿಲ್ಲ... ನವಮಿಯ ಮನೆಗೆ ಒಬ್ಬ ನರ್ಸ್ ಬಂದು ಹೋಗಿ ಮಾಡುತ್ತಿದ್ದಾಳೆ. ದಿನಾ ಬೆಳಗ್ಗೆ ಬಂದು, ರಾತ್ರಿ ಹೊರಡುತ್ತಾಳೆ. ನವಮಿಯ ಕೈ ಗಾಯ ನೋಡಿದರೆ, ಒಬ್ಬ ಪೂರ್ಣಾವಧಿ ನರ್ಸ್ ಬೇಡುವಷ್ಟು ದೊಡ್ಡದಲ್ಲ."

ತನ್ನದೇ ಆಲೋಚನೆಯಲ್ಲಿ ಮುಳುಗಿದ್ದ ನಾಗೇಶನಿಗೆ ಆ ವಿಷಯದ ಮೇಲೆ ಅಷ್ಟು ಗಮನ ಹರಿಯಲಿಲ್ಲ. ಕಾನ್‌ಸ್ಟೆಬಲ್ ಹೋದ ಎಷ್ಟೋ ಹೊತ್ತಿನ ನಂತರ ಅವನಿಗೆ ಆ ವಿಷಯ ಜ್ಞಾಪಕಕ್ಕೆ ಬಂತು.

ಕಾರ್ಗತ್ತಲಲ್ಲೊಂದು ಬೆಳಕಿನ ಕಿರಣ!

"ಸುರೇಶ್..." ಕೂಗಿದ.

"ಸುರೇಶ್... ಚೇತನ್‌ಕುಮಾರ್‌ನ ಆಫೀಸಿನ ಸುತ್ತ ಮುತ್ತ ಇರುವ ಎಲ್ಲಾ ಕ್ಯಾಮರಗಳಲ್ಲಿ, ಕೊಲೆಯಾದ ದಿನ ನಾಲ್ಕು ಗಂಟೆಯಿಂದ ಆರು ಗಂಟೆಯ ವರೆಗೆ ಓಡಾಡಿದವರು ಮತ್ತು ಅವರಿಗೂ ಈ ಕೇಸ್‌ಗೂ ಏನಾದರೂ ಕನೆಕ್ಷನ್ ಇದೆಯಾ ಹುಡುಕು. ನವಮಿಯ ಮೆಸೇಜ್ ಬಂದಿತ್ತಲ್ಲ ಆ ನಂಬರ್‌ನಿಂದ ಇನ್ಯಾರಾರಿಗೆ ಕಾಲ್ ಹೋಗಿದೆ ಮತ್ತು ಬಂದಿದೆ ಎಂಬುದನ್ನು ತಿಳಿದುಕೋ..."

ಸುರೇಶ ಅರ್ಥವಾಗದವನಂತೆ ನೋಡಿದ.

ನಿನ್ನ ಹುಡುಕಾಟದ ನಿನಗೆ ಗಮ್ಯದ ಕಡೆ ದಾರಿ ತೋರಲಿಲ್ಲ ಅಂದರೆ ಹುಡುಕಾಟದ ಫೋಕಸ್ ಅನ್ನು ದೊಡ್ಡದು ಮಾಡು.

"ಇದು ಈ ರೀತಿ ಡೆಡ್ ಎಂಡ್‌ಗೆ ಬಂದು ನಿಂತಾಗ ಉಪಯೋಗಿಸುವ ಸ್ಟ್ರಾಟಜಿ." ಎನ್ನುತ್ತಾ ನಾಗೇಶ್ ಅಲ್ಲಿಂದ ಎದ್ದ.

★★★

"ಮಿಸೆಸ್ ನವಮಿ, ನಿಮಗೂ ಮತ್ತು ಚೇತನ್‌ಕುಮಾರ್‌ಗೂ ಎಷ್ಟು ದಿನದಿಂದ ಪರಿಚಯ?"

ನಾಗೇಶನ ಪ್ರಶ್ನೆಗಳಿಂದ ಸಿಡಿಮಿಡಿಗೊಂಡ ನವಮಿ...

"ಅವನ ಸಿನಿಮಾಗಳಲ್ಲಿ ಅಭಿನಯಿಸಿದ್ದೆ. ಹಾಗಾಗಿ ಸುಮಾರು ವರ್ಷಗಳಿಂದ ಪರಿಚಯ."

"ಆದರೆ ಅವನ ಫೋನ್ ರೆಕಾರ್ಡ್‌ನಲ್ಲಿ ನೀವು ಅವನೊಡನೆ ಎರಡು ಬೇರೆ ಬೇರೆ ನಂಬರಿನಿಂದ ಮಾತಾಡುತ್ತಿದ್ದೀರಿ? ಕೊಲೆಯಾದ ದಿನ ನೀವು ಮೆಸೇಜ್ ಕಳುಹಿಸಿದ ನಂಬರ್, ಕೇವಲ ಮೂರು ತಿಂಗಳ ಹಿಂದೆ ಆಕ್ಟಿವ್ ಆಗಿದೆ?"

"ಸೊ ವಾಟ್? ಈಗ ನೀವು ಬಂದಿರುವ ಉದ್ದೇಶ ಹೇಳಿ ಸಾಕು..."

"ನಿಮ್ಮ ಗಂಡ, ನಿಮ್ಮ ವಿರುದ್ಧ ಸಾಕ್ಷಿ ಹೇಳಿದ್ದಾರೆ. ಅವರ ಮೊದಲ ಸ್ಟೇಟ್‌ಮೆಂಟ್ ಹಿಂಪಡೆದಿದ್ದಾರೆ."

"ಗೊತ್ತು ಅವನು ಹೀಗೇ ಮಾಡಿ ನನ್ನನ್ನು ಸಿಕ್ಕಿ ಹಾಕಿಸಲು ನೋಡುತ್ತಾನೆ ಅಂತ ಗೊತ್ತು. ತನ್ನ ಇಡೀ ಜೀವಮಾನವೆಲ್ಲಾ ಸುಳ್ಳಿನಿಂದಲೇ ಬದುಕಿದವನು ಅವನು. ಅದಕ್ಕೇ ಅವನ ಜೊತೆ ಮಗಳನ್ನು ಬಿಡಲ್ಲ ಅಂದಿದ್ದೆ... ಅದಕ್ಕೇ ಹಾಗೆ ನಾಟಕ ಆಡಿದ್ದಾನೆ."

"ಅದೇನೋ ಈ ಕೇಸ್‌ನಲ್ಲಿ ನಿಮ್ಮ ಮಗಳ ಕಸ್ಟಡಿ, ಒಂದು ಭಾಗವಾಗಿದೆ ಅಂತ ಅನಿಸುತ್ತಿದೆ. ಒಂದುಬಾರಿ ನಿಮ್ಮ ಮಗಳನ್ನು ಕರೆಯಿರಿ, ಅವಳ ಹತ್ತಿರ ಮಾತಾಡಬೇಕು."

ಮೊದಲಬಾರಿಗೆ ನಾಗೇಶನ ಮಾತುಗಳನ್ನು ಕೇಳಿ ನವಮಿ ಗಲಿಬಿಲಿಗೊಂಡಳು.

"ಅವಳು ಯಾಕೆ ಈಗ? ಅವಳಿಗೂ ಇದಕ್ಕೂ ಏನೂ ಸಂಬಂಧವಿಲ್ಲ... ನಿಮಗೆ ಅನುಮಾನ ಇರುವುದು ನನ್ನ ಮೇಲೆ ತಾನೇ; ನನ್ನನ್ನು ಅರೆಸ್ಟ್ ಮಾಡಿ. ನಾನು ತಪ್ಪು ಮಾಡಿದ್ದರೆ ಶಿಕ್ಷೆ ಆಗುತ್ತದೆ.''